■ ಹನಿ

# ಸತ್ಯಾರ್ಥಿಯ ನೊಬೆಲ್ ಯಾತ್ರೆ



ಹಿತ್ತಲ ಗಿಡ ಮದ್ದಲ್ಲ. ಅಕ್ಟೋಬರ್ 10ರ ಶುಕ್ರವಾರ ಬೆಳಿಗ್ಗೆಯವರೆಗೂ ಈ ಕೈಲಾಶ್ ಸತ್ಯಾರ್ಥಿ ಯಾರೆಂದು ಕೋಟ್ಯಾಂತರ ಭಾರತೀಯರಿಗೆ ಗೊತ್ತೇ ಇರಲಿಲ್ಲ. ಗೊತ್ತಿದ್ದ ಕೆಲವೇ ನೂರು ಜನರಿಗೂ, 'ಯಾರೋ ಗಾಂಧಿವಾದಿ, ಬೀದಿಮಕ್ಕಳಿಗಾಗಿ ಎನ್‌ಜಿಒ ಕಟ್ಟಿಕೊಂಡು ದುಡಿಯುತ್ತಿರುವ ವ್ಯಕ್ತಿ' ಎಂದಷ್ಟೇ ಗೊತ್ತಿತ್ತು. ಯಾವ ಮಾಧ್ಯಮಗಳೂ ಈತನ ಬೆನ್ನುಹತ್ತಿ ಪೂರ್ಣ ಪುಟದ ಇಂಟರ್‌ವ್ಯೂ ಮಾಡಿರಲಿಲ್ಲ. ಏಕೆಂದರೆ ಈತ ಪೇಜ್ ಥ್ರೀ ಐಟಂ ಅಲ್ಲ. ಹಾಗೆಂದು ನಮ್ಮ ಪತ್ರಿಕೆಗಳಲ್ಲಿ ಈತನ ಸುದ್ದಿ ಯಾವತ್ತೂ ಬಂದಿಲ್ಲವೆಂದಲ್ಲ. 2011ರಲ್ಲಿ ದೆಹಲಿಯಲ್ಲಿ ಗಾರ್ಮೆಂಟ್‌ನಲ್ಲಿ ದುಡಿಯುತ್ತಿದ್ದ ಹಲವಾರು ಬಾಲಕಾರ್ಮಿಕರನ್ನು ಈತನ 'ಬಚ್‌ಪನ್ ಬಚಾವೊ ಆಂದೋಲನ್' ಸದಸ್ಯರು ಬಿಡುಗಡೆ ಮಾಡಿಸಿದಾಗ ಈತನ ಮೇಲೆ ಹಲ್ಲೆ ನಡೆದ ಸುದ್ದಿ ಬಂದಿತ್ತು. ಅದಕ್ಕೂ ಮುನ್ನ ಗ್ರೇಟ್ ರೋಮನ್ ಸರ್ಕಸ್ ಕಂಪೆನಿಯಲ್ಲಿದ್ದ ಎಳೆಯ ಮಕ್ಕಳನ್ನು ಬಿಡಿಸಿಕೊಂಡು ಬಂದಾಗಲೂ ಈತನ ಮೇಲೆ ಮಾರಣಾಂತಿಕ ಹಲ್ಲೆ ನಡೆದಿತ್ತು. ಎರಡು–ಮೂರು ಸಲ ಈತನ ಕಚೇರಿಯ ಮೇಲೆ ದಾಳಿ ಮಾಡಿದ ದುಷ್ಕರ್ಮಿಗಳು ಪೀಠೋಪಕರಣಗಳನ್ನು ಒಡೆದು ಹಾಕಿದ್ದೂ ಸುದ್ದಿಯಾಗಿತ್ತು.

ಶುಕ್ರವಾರ ಮಧ್ಯಾಹ್ನದ ಹೊತ್ತಿಗೆ ನೊಬೆಲ್ ಶಾಂತಿ ಪ್ರಶಸ್ತಿ ಪ್ರಕಟವಾಗಿದ್ದೇ ಕೈಲಾಶ್ ಸತ್ಯಾರ್ಥಿಯ ಹೆಸರು ಜಗದ್ವಿಖ್ಯಾತವಾಯಿತು. 'ಯಾರೀ ಸತ್ಯಾರ್ಥಿ?' ಎಂದು ಭಾರತೀಯರು ಜಾಲತಾಣಗಳಲ್ಲಿ ಹುಡುಕಾಡತೊಡಗಿದ್ದರು! ಆಗ ವಿವರ ಸಿಕ್ಕಿದ್ದು ವಿದೇಶೀ ಮಾಧ್ಯಮಗಳಲ್ಲಿ! ವಾಲ್‌ಸ್ಟ್ರೀಟ್ ಜರ್ನಲ್, ಬಿಬಿಸಿ, ಸಿಎನ್‌ಎನ್, ಜಪಾನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಶನ್‌ಗಳು ಅದಾಗಲೇ ಈತನ ಬಗ್ಗೆ ಉದ್ದುದ್ದ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದವು. ದಿ ಟೈಮ್, ಲೈಫ್, ರೀಡರ್ಸ್ ಡೈಜೆಸ್ಟ್, ನ್ಯೂಯಾರ್ಕ್ ಟೈಮ್ಸ್, ಟೈಮ್ಸ್ ಲಂಡನ್, ವಾಷಿಂಗ್ಟನ್ ಪೋಸ್ಟ್ ಮುಂತಾದ ಪತ್ರಿಕೆಗಳೆಲ್ಲ ಈತನ ಬಗ್ಗೆ ಪುಟಗಟ್ಟಲೆ ಸಚಿತ್ರ ಲೇಖನಗಳನ್ನು ಬರೆದಿದ್ದವು!

'ಹಳೆ ಕಬ್ಣ, ಹಳೆ ಪೇಪರ್' ಬಗ್ಗೆ ಹಾಡುತ್ತಿದ್ದ ಗಾಯಕ ಕೈಲಾಶ್ ಖೇರ್ ಬಗ್ಗೆ ಮಾತ್ರ ಗೊತ್ತಿದ್ದ ಭಾರತೀಯ ಯುವಜನರೆಲ್ಲ ಕೈಲಾಶ್ ಸತ್ಯಾರ್ಥಿಯನ್ನು ಹೊಗಳತೊಡಗಿದ್ದರು. ಸತ್ಯಾರ್ಥಿಯ ಟ್ವಿಟ್ಟರ್ ಅಕೌಂಟಿನಲ್ಲಿ ಶುಕ್ರವಾರ ಬೆಳಿಗ್ಗೆ ಕೇವಲ 200ರಷ್ಟಿದ್ದ ಫಾಲೋವರ್‌ಗಳ ಸಂಖ್ಯೆ ಅವತ್ತು ರಾತ್ರಿಯ ಹೊತ್ತಿಗೆ 20 ಸಾವಿರಕ್ಕೆ ಏರಿತ್ತು!

ಕಳೆದ 34 ವರ್ಷಗಳಿಂದ ಭಾರತದಲ್ಲಿ ಬಾಲಕಾರ್ಮಿಕರ ಮುಕ್ತಿ ಮತ್ತು ಪುನರ್ವಸತಿಗೆ ದುಡಿಯುತ್ತಿರುವವರು ಈ ಸತ್ಯಾರ್ಥಿ. ಈವರೆಗೆ 78 ಸಾವಿರಕ್ಕೂ ಹೆಚ್ಚು ಬಾಲ ಕಾರ್ಮಿಕರನ್ನು ಬಿಡುಗಡೆಗೊಳಿಸಿ, ಶಿಕ್ಷಣ–ಉದ್ಯೋಗ ಒದಗಿಸಿದ ಹೆಮ್ಮೆ ಇವರ 'ಬಚ್‌ಪನ್ ಬಚಾವೊ' ಆಂದೋಲನದ್ದು.

ಭೋಪಾಲ್ ಬಳಿಯ ವಿದಿಶಾದಲ್ಲಿ ಹುಟ್ಟಿ ಬೆಳೆದ ಕೈಲಾಶ್ ಸತ್ಯಾರ್ಥಿ, ಸರ್ಕಾರಿ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದು ಪಿಜಿ ಡಿಪ್ಲೊಮಾ ಮುಗಿಸಿದವರು. ಅದೇ ದಾರಿ ಹಿಡಿದಿದ್ದರೆ ಕೈತುಂಬ ಸಂಬಳ ಬರುವ ಹುದ್ದೆಯಲ್ಲಿ ಇರುತ್ತಿದ್ದರು. ಕೆಲಕಾಲ ಶಿಕ್ಷಕರೂ ಆದರು. ಎಳವೆಯಲ್ಲೇ ದುಡಿವ ಮಕ್ಕಳಿಗಾಗಿ ಮರುಗಿ, ಸಮಾನಮನಸ್ಕರ ಜತೆ ಎನ್‌ಜಿಒ ಕಟ್ಟಿದರು. ಆಗಿನ್ನೂ ಮಿಂಟೊ ರಸ್ತೆಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಸತ್ಯಾರ್ಥಿ ಸಂಬಳದ ಕೆಲಸ ಬಿಟ್ಟು ಸಮಾಜಸೇವೆಯ ಸಂಕಲ್ಪ ತೊಟ್ಟಾಗ, ಒಂದು ವರ್ಷದ ಮಗುವನ್ನು ಕಟ್ಟಿಕೊಂಡು ಪತ್ನಿ ಸುಮೇಧಾ ಅವರೂ ಗಂಡನಿಗೆ ಹೆಗಲು ಕೊಟ್ಟು ನಿಂತರು. ಸಂಸ್ಥೆ ಬೆಳೆದಂತೆ ಅವರ ಕಾರ್ಯವ್ಯಾಪ್ತಿಯೂ ಜಗತ್ತಿನಾದ್ಯಂತ ಬೆಳೆಯಿತು. ಅಮೆರಿಕದ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ಅವರೇ ವೇದಿಕೆಯಲ್ಲಿ ನಿಂತು ಸತ್ಯಾರ್ಥಿಯವರ ಸಾಧನೆಯ ವಿವರಗಳಿದ್ದ ಪುಸ್ತಕವನ್ನು ಬಿಡುಗಡೆ ಮಾಡಿದರು. ವಿಶ್ವಸಂಸ್ಥೆ ತನ್ನ ಶಿಕ್ಷಣ ಸಮಿತಿಯ ಸದಸ್ಯತ್ವ ನೀಡಿತು. ಈ ಸಮಿತಿಯಲ್ಲಿ ಆಯ್ದ ದೇಶಗಳ ಪ್ರಧಾನಮಂತ್ರಿಗಳು, ರಾಷ್ಟ್ರಾಧ್ಯಕ್ಷರು ಮತ್ತು ವಿಶ್ವಸಂಸ್ಥೆಯ ಸಮಿತಿಗಳ ಮುಖ್ಯಸ್ಥರೂ ಸದಸ್ಯರಾಗಿದ್ದಾರೆ.

ಜನವರಿ 11ಕ್ಕೆ ಸತ್ಯಾರ್ಥಿಯವರಿಗೆ 60 ತುಂಬಿದೆ. ಅವರ ಮಗ ಭುವನ್ ರಿಬು ವಕೀಲನಾಗಿ ಹಾಗೂ ಮಗಳು ಅಸ್ಮಿತಾ (ಎಕನಾಮಿಕ್ಸ್ ಪದವೀಧರೆ) ಕಾರ್ಯಕರ್ತೆಯಾಗಿ ಅಪ್ಪನ ಜತೆಗಿದ್ದಾರೆ. ನೊಬೆಲ್ ಪ್ರಶಸ್ತಿ ಬಗ್ಗೆ ಮಾಧ್ಯಮಗಳು ಪ್ರತಿಕ್ರಿಯೆ ಕೇಳಿದಾಗ, ಸತ್ಯಾರ್ಥಿಯವರು ನೆನಪಿಸಿಕೊಂಡದ್ದು ಗಾಂಧೀಜಿಯವರನ್ನು! 'ಗಾಂಧೀಜಿಯವರ ನಿಧನದ ಬಳಿಕ ಹುಟ್ಟಿದವನು ನಾನು. ಅವರಿಗೆ ಈ ಪ್ರಶಸ್ತಿ ಸಿಕ್ಕಿದ್ದರೆ ನನಗೆ ಇದಕ್ಕಿಂತ ಹೆಚ್ಚು ಸಂತೋಷವಾಗುತ್ತಿತ್ತು' ಎಂದರು! 'ಮಕ್ಕಳು ನನಗೆ ಸ್ನೇಹಿತರಿದ್ದಂತೆ. ಅವರಿಂದ ನಾನು ಮುಗ್ಧತೆ ಮತ್ತು ಪಾರದರ್ಶಕತೆಯನ್ನು ಕಲಿತಿದ್ದೇನೆ' ಎಂದರು.

ಅಂದ ಹಾಗೆ, 2014ರ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಕೈಲಾಶ್ ಸತ್ಯಾರ್ಥಿಯವರು ನೆರೆಯ ಪಾಕಿಸ್ತಾನದ ಮಲಾಲಾ ಯೂಸುಫ್‌ಝೈ ಜತೆಗೆ ಹಂಚಿಕೊಂಡಿದ್ದಾರೆ. ಆಕೆಗಿನ್ನೂ 17ರ ಹರೆಯ! 'ಅಯ್ಯೋ ಇಷ್ಟು ಸಣ್ಣ ವಯಸ್ಸಿನಲ್ಲೇ ಆಕೆಗೆ ನೊಬೆಲ್ ಏಕೆ ಕೊಟ್ಟಿದ್ದಾರೆ?' ಎಂದು ಮೂಗು ಮುರಿದವರಿದ್ದಾರೆ. ಆದರೆ ಅವರು ಯಾರೂ 'ಅಯ್ಯೋ, ಸತ್ಯಾರ್ಥಿಯವರಿಗೆ ಇಷ್ಟು ತಡವಾಗಿ ನೊಬೆಲ್ ಪ್ರಶಸ್ತಿ ಕೊಟ್ಟರಾ?' ಎಂದು ಬೇಜಾರು ಮಾಡಿಕೊಂಡಿಲ್ಲ!

ನಮ್ಮ ಹಿತ್ತಿಲ ಗಿಡವನ್ನು ನೊಬೆಲ್ ಪ್ರಶಸ್ತಿ ಸಮಿತಿ ಗುರುತಿಸಿದೆ. ನಮ್ಮದೇ ಸರ್ಕಾರ ಈವರೆಗೆ ಒಂದು 'ಪದ್ಮಶ್ರೀ'ಯನ್ನೂ ಕೊಟ್ಟಿಲ್ಲ! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65